ದಿನಾಂಕಃ 19.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಕೆ.ಎ.ಎಂ. ವಕೀಲರಿಂದಃ**

ಪಿರ್ಯಾದಿ ನನಗೆ ಕಳೆದ 8 ವರ್ಷಗಳಿಂದ ಪರಿಚಯ. ಪಿರ್ಯಾದಿಯೊಂದಿಗೆ ಪಾರ್ಟ್ನರ್ ಆಗಿ ಶುಂಠಿ ಬೆಳೆಯುತ್ತಿದ್ದೆ ಎಂದು ಹೇಳಿರುವ ಸಂಬಂಧ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಆ ರೀತಿ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಗೋಣೀಬೀಡು ಗ್ರಾಮದ ಪೂರ್ಣೇಶ್ ರವರ ಜಮೀನಿನಲ್ಲಿ ಶುಂಠಿ ಬೆಳೆದಿದ್ದೆವು. ಆ ಜಮೀನಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಸದರಿ ಜಮೀನಿನ ದಾಖಲೆಯನ್ನು ಹಾಜರುಪಡಿಸಿಲ್ಲ. ಸುಮಾರು 1¾ ಜಮೀನಿನಲ್ಲಿ ಶುಂಠಿ ಬೆಳೆದಿದ್ದೆ. ವರ್ಷಕ್ಕೆ 180 ಮೂಟೆಯಂತೆ ಶುಂಠಿ ಬೆಳೆ ಬೆಳೆಯುತ್ತಿದ್ದೆ, ಆದರೆ 2020 ರಲ್ಲಿ ಬೆಳೆ ನಷ್ಟವಾಗಿದೆ. 2020 ರಲ್ಲಿ ಮಳೆಯಿಂದಾಗಿ ಎಲ್ಲಿಯೂ ಸಹಾ ಬೆಳೆ ನಾಶವಾಗಿಲ್ಲ ಎಂದರೆ ಸಾಕ್ಷಿಯು ಬ್ಯಾಕ್ಟೀರಿಯದ ಕಾರಣದಿಂದ ಬೆಳೆ ನಾಶವಾಯಿತು ಎಂದು ನುಡಿಯುತ್ತಾರೆ. ಈ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ತಪ್ಪಿಸಿಕೊಳ್ಳುವ ಕಾರಣಕ್ಕಾಗಿ ಸುಳ್ಳು ಕಥೆಯನ್ನು ಸೃಷ್ಟಿಸಿ ಒಂದೊಂದು ಕಾರಣ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಶುಂಠಿ ಬೆಳೆ ಮಾರಾಟದಿಂದ ಬಂದ ಹಣದ ಪೈಕಿ ರೂ.50,000/- ಹಣ ಖರ್ಚಿಗೆಂದು ಇಟ್ಟುಕೊಂಡಿದ್ದೆ ಎಂದು ಹೇಳಿರುವ ಸಂಬಂಧ ಯಾವುದೇ ಬರವಣಿಗೆ ಆಗಿಲ್ಲ. ಪಿರ್ಯಾದಿಯೊಂದಿಗೆ ವ್ಯವಹಾರ ಮಾಡಿದ್ದೆ ಎಂದು ಹೇಳಿರುವ ಸಂಬಂಧ ಬರವಣಿಗೆ ಮಾಡಲು ತೊಂದರೆ ಇತ್ತ ಎಂದರೆ ಸಾಕ್ಷಿಯು ಮಾತುಕತೆಯಲ್ಲಿ ವ್ಯವಹಾರ ಆಗಿದೆ ಎಂದು ನುಡಿಯುತ್ತಾರೆ. ಆ ರೀತಿ ನಮ್ಮ ಊರಿನಲ್ಲೇ ಮಾತುಕತೆಯಾಗಿದ್ದು ಆ ಸಮಯಕ್ಕೆ ನನ್ನ ತಮ್ಮ ಸಂದೀಪ್ ರವರು ಹಾಜರಿದ್ದರು. ಪಾಲುದಾರಿಕೆಯಲ್ಲಿ ಶುಂಠಿ ಬೆಳೆಯುವ ವ್ಯವಹಾರ ಮಾಡಿದ್ದರೆ ಬರವಣಿಗೆ ಮಾಡಿಕೊಳ್ಳಬೇಕಾಗಿತ್ತು ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಯಾವಾಗಲೂ ಶುಂಠಿ ಬೆಳೆಯುವ ವ್ಯವಹಾರ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ನನ್ನ ತಮ್ಮ ಶುಂಠಿ ಮಾರಾಟ ಮಾಡಿದ್ದ ಕಾರಣ ಅವರ ಅಕೌಂಟ್ ನಿಂದ ಪಿರ್ಯಾದಿಗೆ ಹಣ ಕಳುಹಿಸಿದ್ದು ನನ್ನ ಅಕೌಂಟ್ ನಿಂದ ಕಳುಹಿಸಲಾಗಿಲ್ಲ. ನಿಡಿ-1 ನನ್ನ ತಮ್ಮನ ಬ್ಯಾಂಕ್ ಖಾತೆಯ ಪಾಸ್ ಬುಕ್. ನಾನು ನನ್ನ ತಮ್ಮ ಒಟ್ಟಿಗೆ ವಾಸವಿದ್ದೇವೆ. ನಾನು ಹಾಗೂ ಪಿರ್ಯಾದಿ ಪಾಲುದಾರಿಕೆಯಲ್ಲಿ ವ್ಯವಹಾರ ಮಾಡಿದ್ದರೆ ನನ್ನ ಬ್ಯಾಂಕ್ ಅಕೌಂಟ್ ಮೂಲಕವೇ ಹಣ ಕಳುಹಿಸುತ್ತಿದ್ದೆ ಎಂದರೆ ಸರಿಯಲ್ಲ.

ನನ್ನ ತಮ್ಮ ಸಹಾ ವ್ಯವಸಾಯ ಮಾಡುತ್ತಾರೆ. ಪಿರ್ಯಾದಿಗೆ ಕರ್ನಾಟಕ ಬ್ಯಾಂಕ್, ಗೋಣೀಬೀಡು ಶಾಖೆಯಲ್ಲಿ ಬ್ಯಾಂಕ್ ಖಾತೆ ಇದೆ. ಪಿರ್ಯಾದಿಯ ಬ್ಯಾಂಕ್ ಖಾತೆ ಸಂಖ್ಯೆ ನನಗೆ ಗೊತ್ತಿಲ್ಲ. ನಿಡಿ-1 ರ ಪ್ರಕಾರ ಜಮೆ ಆಗಿರುವ ಹಣಕ್ಕೂ ಈ ಪ್ರಕರಣಕ್ಕೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಚೆಕ್ ಕಳೆದು ಹೋಗಿದೆ ಎಂದು ಪಿರ್ಯಾದಿ ನನಗೆ ತಿಳಿಸಿದಾಗ ನಾನು ಪೋಲಿಸರಿಗೆ ದೂರು ಕೊಟ್ಟಿಲ್ಲ. ಆ ರೀತಿ ದೂರು ಕೊಡಲು ಸಮಸ್ಯೆ ಇತ್ತ ಎಂದರೆ ಸಾಕ್ಷಿಯು ಪಾಲುದಾರಿಕೆಯಲ್ಲಿ ವ್ಯವಹಾರ ಮಾಡುತ್ತಿದ್ದ ಕಾರಣ ಅವರ ವಿರುದ್ಧ ದೂರು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಚೆಕ್ ನ್ನು ವಾಪಸ್ಸು ಕೊಡುವಂತೆ ಕೇಳಿ ಪಿರ್ಯಾದಿಗೆ ವಕೀಲರ ಮೂಲಕ

ನೋಟೀಸು ಕಳುಹಿಸಿಲ್ಲ. ಪಿರ್ಯಾದಿ ಬಳಿ ಇದ್ದ ನನ್ನ ಚೆಕ್ ನ್ನು ಮಾನ್ಯ ಮಾಡದಂತೆ ನಾನು ಬ್ಯಾಂಕಿನವರಿಗೆ ಮನವಿ ಸಲ್ಲಿಸಿಕೊಂಡಿರಲಿಲ್ಲ. ಯಾವ ದಿನಾಂಕದಂದು ಪಿರ್ಯಾದಿಯ ಬಳಿ ಹೋಗಿ ಚೆಕ್ ನ್ನು ವಾಪಸ್ಸು ಕೇಳಿದ್ದೇನೆ ಎಂದು ನನಗೆ ಗೊತ್ತಿಲ್ಲ. ಪಿರ್ಯಾದಿಯ ಮನೆಗೆ ಹೋಗಿ ಚೆಕ್ ನ್ನು ವಾಪಸ್ಸು ಕೊಡುವಂತೆ ಕೇಳಿದ್ದೆ. ಆ ಸಮಯಕ್ಕೆ ನನ್ನೊಂದಿಗೆ ಬೇರೆ ಯಾರು ಇರಲಿಲ್ಲ.

ಪಿರ್ಯಾದಿಯ ಮಗನ ವಿರುದ್ಧ ನಾನು ದೂರು ಕೊಟ್ಟಿಲ್ಲ. ಸಾಕ್ಷಿಯು ಸ್ವತಃ ಅವರು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ ನಂತರ ನನಗೆ ವಿಚಾರ ತಿಳಿಯಿತು ಎಂದು ನುಡಿಯುತ್ತಾರೆ. ಆನಂತರ ಪಿರ್ಯಾದಿಯ ಮಗನ ವಿರುದ್ಧ ದೂರು ಕೊಡಲು ನಾನು ಪ್ರಯತ್ನಿಸಿಲ್ಲ. ಆ ರೀತಿ ದೂರು ಕೊಡಲು ತೊಂದರೆ ಇತ್ತ ಎಂದರೆ ಸಾಕ್ಷಿಯು ನಾನು ಅವರ ತಂದೆಯೊಂದಿಗೆ ವ್ಯವಹಾರ ಮಾಡಿದ್ದೆ ಎಂದು ನುಡಿಯುತ್ತಾರೆ. ಈ ವಿಚಾರದ ಬಗ್ಗೆ ನಾನು ಪಿರ್ಯಾದಿ ಮಗನಿಗೆ ವಕೀಲರ ಮೂಲಕ ನೋಟೀಸು ಕಳುಹಿಸಿಲ್ಲ. ಪಿರ್ಯಾದಿ ನನಗೆ ದೇವಸ್ಥಾನದಿಂದ ನೋಟೀಸು ಕಳುಹಿಸಿದ್ದಾರೆ ಎಂದು ಹೇಳಿರುವ ಸಂಬಂಧ ಸದರಿ ದೇವಸ್ಥಾನದ ಪೂರ್ಣ ಹೆಸರು ತರುವೆ ಚೌಡೇಶ್ವರಿ ದೇವಸ್ಥಾನ. ಆ ನೋಟೀಸ್ ನಲ್ಲಿ ಯಾವ ದಿನಾಂಕ ನಮೂದಾಗಿದೆ ಎಂದು ನನಗೆ ನೆನಪಿಲ್ಲ. ಶುಂಠಿ ವ್ಯವಹಾರದ ಬಾಬ್ತು ಹಣ ಬರಬೇಕು ಎಂದು ನಿಡಿ-2 ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.